Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸುಗೂರು.

ಸಿ.ಸಿ.ನಂ. 714/2023

ಸಿ.ಡಬ್ಲೂ-06

ಪಿ.ಡಬ್ಲೂ-04

| | | |
|---|---|---|
| ಸಾಕ್ಷಿದಾರರ ಹೆಸರು | :- | ಸುಧಾ |
| ತಂದೆಯ ಹೆಸರು | :- | ಶಂಕ್ರಪ್ಪ |
| ವಯಸ್ಸು | :- | 19 ವರ್ಷ |
| ಉದ್ಯೋಗ | :- | ಕೂಲಿ ಕೆಲಸ |
| ವಾಸಸ್ಥಳ | :- | ಹಾಲಭಾವಿ ತಾಂಡ |

ದಿನಾಂಕ 06-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ಚಾ.ಸಾ-1 ನನ್ನ ತಾಯಿ. ಚಾ.ಸಾ-2 ಮತ್ತು 3 ನಮ್ಮೂರಿನವರು ಪರಿಚಯ ಇದೆ. ಚಾ.ಸಾ-4, 5 ಮತ್ತು 7 ನನ್ನ ಮಾವಂದಿರು. ಚಾ.ಸಾ-8 ನನ್ನ ಅಜ್ಜಿ. 1ನೇ ಆರೋಪಿ ನನ್ನ ದೊಡ್ಡಪ್ಪ. 2ನೇ ಆರೋಪಿ ಮೃತಪಟ್ಟಿರುತ್ತಾನೆ. 3ನೇ ಆರೋಪಿ ನನ್ನ ದೊಡ್ಡಪ್ಪ. 4 ರಿಂದ 11 ನೇ ಆರೋಪಿತರು ನಮ್ಮ ಸಂಬಂಧಿಕರು.

ದಿನಾಂಕ 11-06-2023 ರಂದು ಬೆಳಿಗ್ಗೆ 8-00 ಗಂಟೆಗೆ ನಾನು ಮತ್ತು ಚಾ.ಸಾ-1 ರವರು ನಮ್ಮ ಮನೆಯ ಮುಂದೆ ಇರುವಾಗ ಚಾ.ಸಾ-1 ರವರು ನಮ್ಮ ತಂದೆಗೆ ಬರಬೇಕಾದ ಆಸ್ತಿಯನ್ನು ಕೊಡಬೇಕು ಎಂದು ಹಿರಿಯರಿಗೆ ಕರೆಯಬೇಕು ಎಂದು ಅವರ ಮನೆಯ ಮುಂದೆ ಇದ್ದಾಗ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಚಾ.ಸಾ-1 ರವರಿಗೆ ಬೋಸೂಡಿ, ಸೂಳೆ ಎಂದು ಅವಾಚ್ಯವಾಗಿ ಬೈದಿರುತ್ತಾರೆ. ನಂತರ ಚಾ.ಸಾ-1 ರವರಿಗೆ ಲೇ ನಿನಗೆ ಬಾಗ ಕೊಡುವದಿಲ್ಲ ಎಲ್ಲಿಗೆ ಹೋಗುತ್ತಿಯಾ ಹೋಗು ಎಂದು ಜೀವ ಬೆದರಿಕೆ ಹಾಕಿರುತ್ತಾರೆ. 1ನೇ ಆರೋಪಿ ಬೈದು ಕಬ್ಬಿಣದ ರಾಡಿನಿಂದ ಚಾ.ಸಾ-1 ರವರ ಹೊಟ್ಟೆಯ ಭಾಗಕ್ಕೆ ಹೊಡೆದಿರುತ್ತಾನೆ. ನಂತರ 1ನೇ ಆರೋಫಿ

ಚಾ.ಸಾ-1 ರವರ ಸೀರೆ ಹಿಡಿದು ಎಳೆದಾಡಿ ಮಾನಬಂಗ ಮಾಡಿರುತ್ತಾನೆ. ನಂತರ 3, 5, 6 ಮತ್ತು 11ನೇ ಆರೋಪಿರು ಬಂದು ಚಾಸಾ-1 ರವರಿಗೆ ಕೈಗಳಿಂದ ಹೊಡೆದಿರುತ್ತಾರೆ. ಆಗ ಚಾ.ಸಾ-4 ಮತ್ತು 5 ರವರು ಜಗಳ ಬಿಡಿಸಲು ಹೋದಾಗ 1ನೇ ಆರೋಪಿ ಚಾ.ಸಾ-5 ರವರಿಗೆ ಕೈ ಮುಷ್ಟಿ ಮಾಡಿ ಎದೆಯ ಬಾಗಕ್ಕೆ ಹೊಡೆದಿರುತ್ತಾನೆ. ಅದೇ ರೀತಿ ಚಾ.ಸಾ-4 ರವರಿಗೆ 5ನೇ ಆರೋಪಿ ಕಟ್ಟಿಗೆಯಿಂದ ಹೊಡೆದಿರುತ್ತಾನೆ. ನಾನು ಜಗಳ ಬಿಡಿಸಿರುತ್ತೇನೆ. ನಂತರ ನನಗೆ ಎಲ್ಲಾ ಆರೋಪಿತರು ಕೈಗಳಿಂದ ಹೊಡೆದಿರುತ್ತಾರೆ. ಚಾ.ಸಾ-7 ಮತ್ತು 8 ರವರು ಬಂದು ಜಗಳ ಬಿಡಿಸಿರುತ್ತಾರೆ. ಕಟ್ಟಿಗೆ ಮತ್ತು ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೇಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು ಶ್ರೀ ಎಸ್.ಆರ್.ಆರ್ ವಕೀಲರಿಂದ : -</u>**

1ನೆ ಆರೋಪಿ ನನಗೆ ಕೈಯಿಂದ ಹೊಡೆದ ಬಗ್ಗೆ ಪೋಲಿಸ್ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ 1ನೆ ಆರೋಪಿಯ ತಮ್ಮನಾಗಿದ್ದು ಆತನು ಮದುವೆಯಾಗುವದಕ್ಕಿಂತ ಮುಂಚೆ ಬೇರೆಯಾಗಿದ್ದ ಎಂದರೆ ಸರಿಯಲ್ಲ. ನಮ್ಮ ತಂದೆ ಹೊಲದಲ್ಲಿ ಭಾಗ ತೆಗೆದುಕೊಂಡಿದ್ದ ಎಂದರೆ ಸರಿಯಲ್ಲ. 1ನೇ ಆರೋಪಿತನು ಅವರು ಬೇರೆಯಾದ ನಂತರ 4 ಎಕರೆ ಜಮೀನನ್ನು ತನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಚಾ.ಸಾ-1 ರವರು ಜಮೀನಿನಲ್ಲಿ ಬಾಗ ಬೇಕು ಎಂದು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಕೇಸು ಹಾಕಿರುತ್ತಾಳೆ ಎಂದರೆ ಸರಿ. ಆ ಆಸ್ತಿಯಲ್ಲಿ ನಮ್ಮ ತಾಯಿಗೆ ಯಾವುದೇ ಬರದಿದ್ದರೂ ಸಹ ಆರೋಪಿತರ ಜೊತೆ ಜಗಳ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಈಗಾಗಲೇ ನಮ್ಮ ತಾಯಿಗೆ 2 ಎಕರೆ ಜಮೀನು ಕೊಟ್ಟಿದ್ದು ಅದನ್ನು ಉಳುಮೆ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ಆ ದ್ವೇಷದಿಂದ ಚಾ.ಸಾ-1 ರವರು ಆರೋಪಿತರ ವಿರುದ್ದ ಸುಳ್ಳು ಕೇಸು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾ.ಸಾ-1, 4 ಮತ್ತು 5 ರವರಿಗೆ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆಯಲ್ಲಿ ಈ ವಿಷಯಗಳನ್ನು ಹೇಳಿರುತ್ತೇನೆ. ಆರೋಪಿತರು ಯಾವುದೇ ಕಟ್ಟಿಗೆಯಿಂದ, ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿಲ್ಲ ಅವಾಚ್ಯವಾಗಿ ಬೈದಿಲ್ಲ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಚಾ.ಸಾ-1 ರವರ ಸೀರೆ ಹಿಡಿದು ಎಳೆದಾಡಿ ಮಾನಬಂಗ ಮಾಡಿಲ್ಲ ಎಂದೆರ ಸರಿಯಲ್ಲ. ನನಗೆ ಕೈಗಳಿಂದ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾ.ಸಾ-1 ರವರು ನಮ್ಮ

ತಾಯಿ ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.